Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಎಚ್) ಇಲಾಖೆ

## ಅಧಿಸೂಚನೆ

*2018, ಏಪ್ರಿಲ್ 7,*

ನಂಬ್ರ 25263/ಲೆಗ್. ಎಚ್1/2017/ಕಾನೂನು. *ತಿರುವನಂತಪುರಂ,* *1193 ಮೀನ 24/*

*1940 ಚೈತ್ರ 17.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆ ಮಂಜೂರು ಮಾಡಿದಂತಹ ಮಸೂದೆಗೆ, 2018 ಏಪ್ರೀಲ್ 7ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 11ನೇ ಅಧಿನಿಯಮ

## 2018ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ

1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಬತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು.

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 26ನೇ ದಿನಾಂಕದಂದು ಜ್ಯಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 88ನೇ ವಿಭಾಗದ ತಿದ್ದುಪಡಿ.—1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮ (1969ರ 21) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 88ನೇ ವಿಭಾಗದಲ್ಲಿ, (1)ನೇ ಉಪ-ವಿಭಾಗದ (ಎ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎ) ಅಂತಹ ಪ್ರತಿಯೊಂದು ವರ್ಗದ ಸಂಘಗಳ ಸದಸ್ಯರು ತಮ್ಮೊಳಗಿನಿಂದ, ನಿಗದಿಪಡಿಸಬಹುದಾದ ಅಂತಹ ರೀತಿಯಲ್ಲಿ ಚುನಾಯಿಸಿದ, ವೃತ್ತದೊಳಗೆ ಸಂಯೋಜಿಸಲ್ಪಟ್ಟ ವಿವಿಧ ವರ್ಗಗಳನ್ನು ಪ್ರತಿನಿಧಿಸುವ ಏಳು ಸದಸ್ಯರು;".

3. ರದ್ಧತಿ ಮತ್ತು ರಕ್ಷಣೆ.— (1) 2018ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧ್ಯಾದೇಶ (2018ರ 2)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿಯೋ ಕೈಗೊಂಡಿರುವುದಾಗಿಯೋ ಭಾವಿಸತಕ್ಕದ್ದು.